# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 254 (291)
ಮಾನ್ಯ ಸದಸ್ಯರ ಹೆಸರು : ಡಾ. ಉಮಾಶ್ರೀ
(ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 09.12.2025
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೈಗಾರಿಕೆಗಳ ಆರಂಭಕ್ಕೆ ಅಗತ್ಯವಿರುವ ಭೂಮಿ ಬಳಕೆ ಬದಲಾವಣೆ ಪ್ರಕ್ರಿಯೆಗೆ ಎನ್.ಒ.ಸಿ ನೀಡಲು ಕಾಲಮಿತಿ ಹೆಚ್ಚಿಸಿರುವ ಬಗ್ಗೆ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಈ ದೂರುಗಳ ಕುರಿತು ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಜಮೀನು ಹಂಚಿಕೆ ಪಡೆದ ಉದ್ದಿಮೆದಾರರು SHLCC/SLSWCC/DLSWCC ಗಳಲ್ಲಿ ಅನುಮೋದಿತ ಯೋಜನೆಗೆ ಜಮೀನು ಬಳಕೆ ಮಾಡಬೇಕಾಗುತ್ತದೆ. ಹಂಚಿಕೆದಾರರು ಮಂಡಳಿಯೊಂದಿಗೆ ನೆರವೇರಿಸಿಕೊಳ್ಳುವ ಗುತ್ತಿಗೆ ಮಾರಾಟ ಕರಾರು ಪತ್ರದ ನಿಯಮಗಳನ್ವಯ ಉದ್ದೇಶಿತ ಯೋಜನೆ ಬದಲಾವಣೆಗೆ ಅವಕಾಶವಿದ್ದು, ಮಂಡಳಿಯ / SHLCC / SLSWCC / DLSWCCಗಳ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ.<br><br>ಹಂಚಿಕೆದಾರರು ಗುತ್ತಿಗೆ ಮಾರಾಟ ಕರಾರು ಪತ್ರ ನಿಯಮಗಳನ್ವಯ ಯೋಜನೆ ಅನುಷ್ಠಾನಗೊಳಿಸಿದ ನಂತರ ಮಂಡಳಿಯಿಂದ ಶುದ್ಧ ಕ್ರಯ ನೆರವೇರಿಸಲಾಗುತ್ತದೆ. ಶುದ್ಧ ಕ್ರಯಪತ್ರದಲ್ಲಿ ಹಂಚಿಕೆದಾರರು ಕೈಗಾರಿಕಾ ಚಟುವಟಿಕೆ ಅಥವಾ ಕೈಗಾರಿಕೆಗಳಿಗೆ ಪೂರಕವಾದ ಚಟುವಟಿಕೆಗಳನ್ನು ನಡೆಸಬೇಕೆಂಬ ಷರತ್ತು ವಿಧಿಸಲಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ಮಂಡಳಿಯಿಂದ ಹಂಚಿಕೆ ಮಾಡಿರುವ ಜಮೀನುಗಳಿಗೆ ಕೈಗಾರಿಕಾ ಚಟುವಟಿಕೆ ಅಥವಾ ಕೈಗಾರಿಕೆಗಳಿಗೆ ಪೂರಕವಾದ ಚಟುವಟಿಕೆಗಳಿಗೆ ಬದಲಾವಣೆ ಮಾಡಲು ಅವಕಾಶವಿದ್ದು, ಕೈಗಾರಿಕೇತರ ಚಟುವಟಿಕೆಗಳಿಗೆ ಭೂ ಬಳಕೆ ಬದಲಾವಣೆ ಮಾಡಲು ಆಸ್ಪದವಿರುವುದಿಲ್ಲ. |
| ಆ) | ಇತ್ತೀಚಿಗೆ ಯಾವ ಯಾವ ಕೈಗಾರಿಕೆಗಳ ಪ್ರಾರಂಭಕ್ಕೆ ಸರ್ಕಾರ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಿದೆ; | |
| ಇ) | ಈ ನಿರಾಕ್ಷೇಪಣಾ ಪ್ರಮಾಣ ಪತ್ರವು ಪ್ರಸ್ತುತ ಯಾವ ಕಾಲಾವಧಿಯಲ್ಲಿ ನೀಡಲಾಗುತ್ತಿದೆ; ಈ ಕಾಲಾವಧಿಯನ್ನು ಕಡಿಮೆ ಮಾಡುವುದರ ಬಗ್ಗೆ ಸರ್ಕಾರ ಚಿಂತಿಸಿದೆಯೇ; ಆಗಿದ್ದಲ್ಲಿ ಯಾವಾಗ ಮಾಡಲಾಗುವುದು? | |

**ಸಂಖ್ಯೆ: ಸಿಐ 588 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು